ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು

ಸ್ಪೆಷಲ್ ಕೇಸ್ ನಂಃ 59/2010

(ಫ್ರಾಸಾ-32 ಚಾಸಾ-107)
ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು
ದಿಃ 30.08.2024.

| | | |
|---|---|---|
| ಸಾಕ್ಷಿದಾರರ ಹೆಸರು | - | ಎಸ್ ಟಿ ಸಿದ್ದಲಿಂಗಪ್ಪ |
| ತಂದೆಯ ಹೆಸರು | - | ತಿಮ್ಮಯ್ಯ . |
| ವಯಸ್ಸು | - | 58 ವರ್ಷ, |
| ಉದ್ಯೋಗ | - | ಹೆಚ್ಚುವರಿ ಪೋಲೀಸ್ ಅಧೀಕ್ಷಕರು, ಉಡುಪಿ |
| ವಾಸ | - | ಉಡುಪಿ |

ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದಃ

ನಾನು ಮಾರ್ಚ್ 2008 ರಿಂದ ಜೂನ್ 2011 ರವರೆಗೆ ದೊಡ್ಡಬಳ್ಳಾಪುರ ವೃತ್ತನಿರೀಕ್ಷಕರಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ದಿನಾಂಕ 12.02.2010 ರಂದು ನಮ್ಮ ಉಪವಿಭಾಗದ ಡಿವೈಎಸ್ಪಿ ವಿಶ್ವನಾಥಪುರ ಪೋಲಿಸ್ ಠಾಣೆಯ ಮೊಕದ್ದಮೆ ಸಂಖ್ಯೆ 10/2010 ಪ್ರಕರಣದಲ್ಲಿ ಆರೋಪಿತರ ಪತ್ತೆಗಾಗಿ ತಂಡಗಳನ್ನು ರಚಿಸಿದ್ದು ನನ್ನ ನೇತೃತ್ವದಲ್ಲಿ ಸಹ ಒಂದು ತಂಡವನ್ನು ರಚಿಸಿದ್ದರು. ಆ ತಂಡದಲ್ಲಿ ಚಾಸಾ-104 ನಾಗರಾಜು, ಚಾಸಾ-91 ವೆಂಕಣ್ಣ, ಚಾಸಾ-92 ಶ್ರೀನಿವಾಸ ಹಾಗೂ ಚಾಸಾ-93 ರಘು ಸಹ ಇದ್ದರು. ಈ ಪ್ರಕರಣದ ಆರೋಪಿತರ ಪತ್ತೆಗಾಗಿ ಬೆಂಗಳೂರು ಗ್ರಾಮಾಂತರ ಪ್ರದೇಶದ ವಿವಿಧ ಸ್ಥಳಗಳಲ್ಲಿ ಹುಡಕಿ ಪತ್ತೆಯಾಗದೇ ಇದ್ದುದರಿಂದ ವರದಿ ನೀಡಿರುತ್ತೇನೆ.

2. ದಿಃ15.02.2010 ರಂದು ಈ ಪ್ರಕರಣದ ಆರೋಪಿತರು ಬಳ್ಳಾರಿಯಲ್ಲಿ ಇದ್ದಾರೆ ಎಂದು ಖಚಿತ ಮಾಹಿತಿ ಡಿವೈಎಸ್ಪಿರವರಿಗೆ ಸಿಕ್ಕ ಮೇರೆಗೆ ನನ್ನನ್ನು ಹಾಗೂ ನನ್ನ ತಂಡವನ್ನು ಬಳ್ಳಾರಿಗೆ ಕಳುಹಿಸಿಕೊಟ್ಟರು. ಆ ದಿನ ಬಳ್ಳಾರಿ ಹಾಗೂ ಬಳ್ಳಾರಿಯ ವಿವಿಧೆಡೆಗಳಲ್ಲಿ ಶೋಧ ಮಾಡಿ ಕೊನೆಯ ಸಂಗನಕಲ್ಲು ಗ್ರಾಮದ ಬಸ್ ನಿಲ್ದಾಣದ ಹತ್ತಿರ ಮೂರು ಜನ

ವ್ಯಕ್ತಿಗಳು ಇದ್ದು ನಮ್ಮೊಂದಿಗೆ ಇದ್ದ ಬಾತ್ಮಿದಾರರು ಇವರು ಆರೋಪಿತರು ಎಂದು ಗುರುತಿಸಿದ ಮೇರೆಗೆ ಸದರಿ ಅಸಾಮಿಗಳ ಹೆಸರು ಮತ್ತು ವಿಳಾಸಗಳನ್ನು ಕೇಳಲಾಗಿ ನಾಗೇಶ (2 ನೇ ಆರೋಪಿ), ಮಂಜುನಾಥ (10 ನೇ ಆರೋಪಿ) ಮತ್ತು ಗೋಪಿ ಅಲಿಯಾಸ್ ವೇಣುಗೋಪಾಲ (12 ನೇ ಆರೋಪಿ) ಎಂದು ತಿಳಿಸಿದರು. ಸದರಿ ಆರೋಪಿತರನ್ನು ಆ ದಿನ ಮಧ್ಯರಾತ್ರಿ 11.00 ಘಂಟೆಗೆ ವಶಕ್ಕೆ ಪಡೆದು ದೊಡ್ಡಬಳ್ಳಾಪುರಕ್ಕೆ ಮರಳಿ ಬಂದು ದಿಃ16.02.2010 ರಂದು ಬೆಳಗ್ಗೆ 11 ಘಂಟೆಗೆ ಡಿವೈಎಸ್ಪಿ ಫ್ರಾಸಾ-28 ರವರ ಮುಂದೆ ಹಾಜರುಪಡಿಸಿರುತ್ತೇವೆ ಹಾಗೂ ಈ ಬಗ್ಗೆ ನಾನು ವರದಿಯನ್ನು ಸಹ ನೀಡಿರುತ್ತೇನೆ. ಸಾಕ್ಷಿ ಸದರಿ ನಿಪಿ-50 ವರದಿ ನೋಡಿ ಗುರುತಿಸಿದ್ದು ಅದರಲ್ಲಿರುವ ಸಾಕ್ಷಿ ಸಹಿಯನ್ನು ನಿಪಿ-50(ಎ) ಎಂದು ಗುರ್ತಿಸಲಾಯಿತು. ನಾವು ವಶಕ್ಕೆ ಪಡೆದ 2, 10 ಮತ್ತು 12 ನೇ ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. (2, 10 ಮತ್ತು 12 ನೇ ಆರೋಪಿತರು ಗೈರು ಹಾಜರಾಗಿದ್ದು ಆರೋಪಿತರ ಪರ ವಕೀಲರು ಹಾಜರಾತಿಗೆ ವಿನಾಯಿತಿ ಅರ್ಜಿ ಸಲ್ಲಿಸಿದ್ದು ಆರೋಪಿತರ ಗುರುತಿಸುವಿಕೆಗಾಗಿ ಯಾವುದೇ ವಿವಾದವಿಲ್ಲ ಎಂದು ನಿವೇದಿಸಿರುತ್ತಾರೆ).

**ಪಾಟೀ ಸವಾಲುಃ 1 ಮತ್ತು 12 ನೇ ಆರೋಪಿ ಪರ ಶ್ರೀ ಎಂ ಆರ್ ಎನ್ ವಕೀಲರಿಂದಃ**

3. ಬಳ್ಳಾರಿಯ ಸಂಗನಕಲ್ಲು ಮತ್ತು ದೊಡ್ಡಬಳ್ಳಾಪುರ ಪೋಲಿಸ್ ಠಾಣೆಗೂ ಸುಮಾರು 250 ಕಿಮೀ ಅಂತರ ಇರುತ್ತದೆ. ಡಿವೈಎಸ್ಪಿರವರ ಆರೋಪಿತರ ಶೋಧಕ್ಕಾಗಿ ತಂಡಗಳನ್ನು ರಚಿಸಿದ ಬಗ್ಗೆ ಲಿಖಿತ ಆದೇಶ ಇರುತ್ತದೆ. ನಮಗೆ ಶೋಧಕ್ಕಾಗಿ ಹಾಗೂ ಆರೋಪಿತರ ಪತ್ತೆಗಾಗಿ ಇಲಾಖಾ ಜೀಪನ್ನು ಕೊಡಲಾಗಿತ್ತು. ಯಾವುದೇ ಸ್ಥಳಕ್ಕೆ ಇಲಾಖಾ ವಾಹನದಲ್ಲಿ ಹೋಗಬೇಕಾದರೆ ಹೊರಟ ದಿನಾಂಕ ಹಾಗೂ ಮರಳಿ ಬಂದ ದಿನಾಂಕ, ಸಮಯ, ಕ್ರಮಿಸಿದ ದೂರ, ಮೊಕದ್ದಮೆ ಸಂಖ್ಯೆ ಲಾಗ್ ಬುಕ್ ನಲ್ಲಿ ನಮೂದು ಮಾಡಬೇಕಾಗುತ್ತದೆ. ಸದರಿ ಲಾಗ್ ಬುಕ್ ಅನ್ನು ತನಿಖಾಧಿಕಾರಿಗಳಿಗೆ ನಾನು ಕೊಟ್ಟಿರುವುದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರಿದು ತನಿಖಾಧಿಕಾರಿಗಳು ಕೇಳಿದರೆ

ಕೊಡಬೇಕಾಗುತ್ತದೆ ಎಂದು ಹೇಳುತ್ತಾರೆ. ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಬಳ್ಳಾರಿಯ ಸಂಗನಕಲ್ಲುಗೆ ಹೋಗಿ 2, 10 ಮತ್ತು 12 ನೇ ಆರೋಪಿತರನ್ನು ಶೋಧಿಸಿ ವಶಕ್ಕೆ ಪಡೆಯದೇ ಇದ್ದುದರಿಂದ ಉದ್ದೇಶಪೂರ್ವಕವಾಗಿ ಸದರಿ ಲಾಗ್ ಬುಕ್ ಅನ್ನು ತನಿಖಾಧಿಕಾರಿಯ ಮುಂದೆ ಹಾಜರು ಮಾಡಿಲ್ಲ ಎಂದರೆ ಸರಿಯಲ್ಲ. ಸಂಗನಕಲ್ಲಿಗೆ ಹೋದ ಸಮಯದಲ್ಲಿ ನಾನು ಯನಿಫಾರ್ಮ್ ನಲ್ಲಿ ಇದ್ದು ಉಳಿದ ಸಿಬ್ಬಂದಿಗಳು ಮಫ್ತಿಯಲ್ಲಿದ್ದರು. ನಮ್ಮನ್ನು ನೋಡಿದ ತಕ್ಷಣ ಸದರಿ ಆರೋಪಿತರು ಓಡಿಹೋಗಲು ಪ್ರಯತ್ನಿಸಿರಲಿಲ್ಲ. ಅವರು ಕುಳಿತಿರಲಿಲ್ಲ. ಆ ಸಮಯದಲ್ಲಿ ಸದರಿ ಆರೋಪಿತರ ವೈಯಕ್ತಿಕ ಶೋಧವನ್ನು ಮಾಡಲಿಲ್ಲ. ಬಂಧನ ಮಹಜರ್ ಅನ್ನು ಸದರಿ ಸ್ಥಳದಲ್ಲಿ ಮಾಡಲಿಲ್ಲ. ದಿಃ15.02.2010 ರಂದು ನಾವು ಸದರಿ ಮೂವರು ಆರೋಪಿತರ ವಾಸದ ಮನೆಗಳಿಗೆ ಹೋಗಿರುವುದಿಲ್ಲ. ದಿಃ16.02.2010 ರಂದು ನಾವು ಸದರಿ ಮೂವರು ಆರೋಪಿತರನ್ನು ಪಂಡಿತಪುರದ ಅವರವರ ಮನೆಗಳಿಂದ ವಶಕ್ಕೆ ಪಡೆದು ಕರೆತಂದು ಫ್ರಾಸಾ-28 ರವರ ಮುಂದೆ ಹಾಜರು ಮಾಡಿರುತ್ತೇವೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 2 ಮತ್ತು 10 ನೇ ಆರೋಪಿತರ ಪರ ಶ್ರೀ ಕೆಎನ್ ಆರ್ ವಕೀಲರಿಂದಃ**

2 ಮತ್ತು 10 ನೇ ಆರೋಪಿತರ ಪರ ವಕೀಲರು 12 ನೇ ಆರೋಪಿ ಪರ ವಕೀಲರು ಮಾಡಿದ ಪಾಟೀ ಸವಾಲನ್ನೇ ಅಳವಡಿಸಿಕೊಳ್ಳಲು ಕೋರಿರುತ್ತಾರೆ.

**ಪಾಟೀ ಸವಾಲುಃ ಉಳಿದ ಆರೋಪಿತರ ಪರ ವಕೀಲರಿಂದಃ**

ಆರೋಪಿತರ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.

**ಮರುವಿಚಾರಣೆಃ ಇಲ್ಲ**

(ಸಾಕ್ಷಿ ಹೇಳಿದಂತೆ ಹೇಳಿಕೆಯನ್ನು ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿ ಓದಿ ಹೇಳಿದ್ದು ಸಾಕ್ಷಿ ಸರಿ ಇರುವುದಾಗಿ ಒಪ್ಪಿರುತ್ತಾರೆ ಎಂದು ದೃಢೀಕರಿಸುತ್ತೇನೆ)

ಓ ಹೇ ಸಾ ಸ ಸಹಿ ಮಾಡಿದ್ದಾರೆ,

(ಕೆ. ಗುರುಪ್ರಸಾದ್)
ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು